

(ವಾರ ವಾರ ಬೇಂದ್ರೆ ವೆಬಿನಾರ್ ಸರಣಿ ಉಪನ್ಯಾಸಗಳ ಸಂಗ್ರಹ)

# ಹಕ್ಕಿ ಹಾರುತಿದೆ...


ಸಂಪಾದಕರು

ಬಸವರಾಜ ಡೋಣೂರ



494.8148

12789



Scanned with OKEN Scanner

ಧಾರವಾಡದ ಡಾ. ದ. ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಸಂಸ್ಥೆಯು ಬೇಂದ್ರೆ ಸಾಹಿತ್ಯದ ಅಧ್ಯಯನ, ಸಂಶೋಧನೆ, ಪ್ರಚಾರ ಮತ್ತು ಪ್ರಕಟಣೆಗೆ ಮೊದಲಿನಿಂದಲೂ ಹೆಚ್ಚು ಒತ್ತು ನೀಡುತ್ತ ಬಂದಿದೆ. ಬೇಂದ್ರೆ ಸಾಹಿತ್ಯ ಮತ್ತು ಬೇಂದ್ರೆಯವರಿಗೆ ಸಂಬಂಧಿಸಿದ ಮಾಹಿತಿ ಸಂಗ್ರಹಿಸುವುದರ ಜೊತೆಗೆ ಬೇಂದ್ರೆಯವರ ಬದುಕು ಬರಹದ ಕುರಿತು ಲೇಖಕರಿಂದ ಪುಸ್ತಕಗಳನ್ನು ಬರೆಯಿಸುವ ಯೋಜನೆಯನ್ನೂ ಹಾಕಿಕೊಂಡಿದೆ. ಈ ಮಹತ್ವದ ಯೋಜನೆಯ ಅಡಿಯಲ್ಲಿ ಡಾ. ಬಸವರಾಜ ಡೋಣೂರ ಸಂಪಾದಿಸಿರುವ 'ಹಕ್ಕಿ ಹಾರುತಿದೆ...' ಕೃತಿ ಪ್ರಕಟಗೊಳ್ಳುತ್ತಿದೆ.

ವಾರ ವಾರ ಬೇಂದ್ರೆ ವೆಬಿನಾರ್ ಸರಣಿ ಮಾಲಿಕೆಯು ಲಾಕ್‌ಡೌನ್‌ನಲ್ಲಿ ಟ್ರಸ್ಟ್ ಆಯೋಜಿಸಿದ ಅತ್ಯಂತ ಮಹತ್ವಾಕಾಂಕ್ಷೆಯ ಯೋಜನೆ. ಈ ಮಾಲಿಕೆ ಆರು ತಿಂಗಳ ಕಾಲ ನಿರಂತರವಾಗಿ ನಡೆಯಿತು. ಪ್ರಪಂಚದ ಯಾವೊಬ್ಬ ಕವಿಯ ಕುರಿತೂ ಆರು ತಿಂಗಳ ಕಾಲ ಅವ್ಯಾಹತವಾಗಿ ಉಪನ್ಯಾಸಗಳು ನಡೆದಿಲ್ಲ. ಈ ಸರಣಿಯಲ್ಲಿ ಮಂಡಿಸಲಾದ ಪ್ರಬಂಧಗಳನ್ನು ಎರಡು ಸಂಪುಟಗಳಲ್ಲಿ ಪ್ರಕಟಿಸಲಾಗುತ್ತಿದೆ. ಇದು ಮೊದಲನೆಯ ಸಂಪುಟ. ಬೇಂದ್ರೆಯವರ ಬದುಕು ಬರಹದೊಂದಿಗಿನ ಸೃಜನಾತ್ಮಕ ಪ್ರಯಾಣದಲ್ಲಿ ನಮ್ಮೊಂದಿಗೆ ಹೆಜ್ಜೆ ಹಾಕಿದ ವಿದ್ವಾಂಸರು, ಲೇಖಕರು, ಸಂಘಟಕರು ಮತ್ತು ಅಧಿಕಾರಿಗಳು ಅಭಿನಂದನಾರ್ಹರು.

**ಡಾ. ಡಿ. ಎಂ. ಹಿರೇಮಠ**
ಅಧ್ಯಕ್ಷರು

₹220



ISBN 819248449-1
9788192484495

**ಡಾ. ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್**
**ಧಾರವಾಡ**

isbn : 9788192484495

Scanned with OKEN Scanner

ಡಾ.ದ.ರಾ.ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಗ್ರಂಥಮಾಲೆ : ಹದಿನೇಳು

# ಪಕ್ಕಿ ಹಾರುತಿದೆ...

ಡಾ. ದ.ರಾ.ಬೇಂದ್ರೆಯವರ 125ನೇ ವರ್ಷದ ಜಯಂತ್ಯುತ್ಸವದ
ಆಚರಣೆಯ ಸಂದರ್ಭದಲ್ಲಿ ಪ್ರಕಟವಾದ ಪುಸ್ತಕ.

(ವಾರ ವಾರ ಬೇಂದ್ರೆ ವೆಬಿನಾರ್ ಸರಣಿ ಉಪನ್ಯಾಸಗಳ ಸಂಗ್ರಹ)

SIMS LIBRARY
ACC. No.: 127789

ಸಂಪಾದಕರು

ಬಸವರಾಜ ಡೋಣೂರ

SOUNDARYA INSTITUTE OF MANAGEMENT & SCIENCE
LIBRARY
Date: 20/10/2022
BANGALORE-73

Soundarya Institute of Management & Science
LIBRARY
REFERENCE

ಪ್ರಸಾರಾಂಗ
ಡಾ.ದ.ರಾ.ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಧಾರವಾಡ
2021

Scanned with OKEN Scanner

**Hakki Harutide...**

Published on the eve of 125th birth anniversary of Dr. Da Ra Bendre

***Edited By*** :

**Prof. Basavaraj Donur**

Registrar, Central University of Karnataka, Kalaburagi.

Ph: 9845634309, Basavarajdonurp@gmail.com

***Published by :***

**Dr. Da.Ra. Bendre Rastriya Smarak Trust**

Bendre Bhavan, Sadhanakeri, Dharwad-580008

Ph : 0836-2975327, Email: bendrebhavan@gmail.com

| | | |
|---|---|---|
| First Impression | : | 2021 |
| Price | : | 220/- |
| Pages | : | xxvi+254 |
| Copies | : | 1000 |
| Paper | : | 70 Gsm NSL Maplitho |
| Book Size | : | 1/8 Demi Size |
| Copyright | : | Dr. Da. Ra. Bendre Rastriya Smarak Trust |
| Cover Design | : | Sinchana Graphics |
| Printers | : | B. G. Printers, Dharwad. |

12789

---

**ಹಕ್ಕಿ ಹಾರುತಿದೆ...**

ಡಾ.ದ.ರಾ.ಬೇಂದ್ರೆಯವರ 125ನೇ ವರ್ಷದ ಜಯಂತ್ಯುತ್ಸವಾಚರಣೆ ಸಂದರ್ಭದಲ್ಲಿ ಪ್ರಕಟವಾದ ಪುಸ್ತಕ:
ವಾರ ವಾರ ಬೇಂದ್ರೆ ವೆಬಿನಾರ್ ಸರಣಿ ಉಪನ್ಯಾಸಗಳ ಸಂಗ್ರಹ

| | | |
|---|---|---|
| ಸಂಪಾದಕರು | : | ಪ್ರೊ. ಬಸವರಾಜ ಡೋಣೂರ, ಕುಲಸಚಿವರು<br>ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರಗಿ<br>ದೂ.: 9845634309 |
| ಪ್ರಕಾಶಕರು | : | ಡಾ. ದ. ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್,<br>ಬೇಂದ್ರೆ ಭವನ, ಸಾಧನಕೇರಿ, ಧಾರವಾಡ–580008.<br>ಫೋನ್: 0836–2975327 |
| ಪ್ರಥಮ ಮುದ್ರಣ | : | 2021 |
| ಬೆಲೆ | : | 220/- |
| ಪುಟಗಳು | : | xxvi+254 |
| ಪ್ರತಿಗಳು | : | 1000 |
| ಬಳಸಿದ ಕಾಗದ | : | 70 ಜಿಎಸ್‌ಎಮ್ |
| ಪುಸ್ತಕದ ಆಕಾರ | : | 1/8 ಡೆಮಿ |
| ಮುಖಪುಟ ವಿನ್ಯಾಸ | : | ಸಿಂಚನ ಗ್ರಾಫಿಕ್ಸ್ |
| ಮುದ್ರಕರು | : | ಬಿ. ಜಿ. ಪ್ರಿಂಟರ್ಸ್, ಧಾರವಾಡ. |

# ಪರಿವಿಡಿ

ಪುಟ ಸಂಖ್ಯೆ

1. ಬೇಂದ್ರೆ ಕಾವ್ಯದ ಅಭ್ಯಾಸ : ಕೆಲವು ಟಿಪ್ಪಣಿಗಳು ...1
ರಾಜೇಂದ್ರ ಚೆನ್ನಿ

2. ಬೇಂದ್ರೆ ಕಾವ್ಯದಲ್ಲಿ ಜ್ಞಾನಮೀಮಾಂಸೆ ...9
ರಾಘವೇಂದ್ರ ಪಾಟೀಲ

3. ಬೇಂದ್ರೆ ಮತ್ತು ಗುರುಪರಂಪರೆ ...28
ರಹಮತ್ ತರೀಕೆರೆ

4. ವರ್ತಮಾನದಲ್ಲಿ ಬೇಂದ್ರೆ ಕಾವ್ಯ ...37
ಶ್ರೀನಿವಾಸ ವಾಡಪ್ಪಿ

5. ಬೇಂದ್ರೆಯವರ ಸಾಹಿತ್ಯ ವಿಮರ್ಶೆಯ ಸ್ವರೂಪ ...47
ಜಿ.ಎಂ. ಪುಟ್ಟಯ್ಯ

6. ಬೇಂದ್ರೆ ಕಾವ್ಯದಲ್ಲಿ ಮಾತೃತ್ವದ ಐದು ಮುಖಗಳು ...68
ಬಸವರಾಜ ವಕ್ಕುಂದ

7. ಬೇಂದ್ರೆ ನಾಟಕಗಳ ರಂಗಸಾಧ್ಯತೆ ...99
ಶ್ರೀಪತಿ ಮಂಜನಬೈಲ್

8. ಬೇಂದ್ರೆಯವರ ಅನುವಾದಗಳ ಅನುಸಂಧಾನ ...109
ಆರ್. ತಾರಿಣಿ ಶುಭದಾಯಿನಿ

9. ಬೇಂದ್ರೆ ಕಾವ್ಯದಲ್ಲಿ ವಿಶ್ವಮೈತ್ರಿ ...124
ಗೀತಾ ವಸಂತ

10. ಹಕ್ಕಿ ಹಾರುತಿದೆ ನೋಡಿದಿರಾ ? ...134
ಬಸವರಾಜ ಕೋಡಗುಂಟಿ

11. ಬೇಂದ್ರೆಯವರ ಸಾಹಿತ್ಯದಲ್ಲಿ ಹಾಸ್ಯಪ್ರಜ್ಞೆ ...163
ಸಂಗಮನಾಥ ಲೋಕಾಪೂರ

Scanned with OKEN Scanner

BASAVARAJ OKKUNDA

# ಬೇಂದ್ರೆ ಕಾವ್ಯದಲ್ಲಿ ಮಾತೃತ್ವದ ಐದು ಮುಖಗಳು

– ಬಸವರಾಜ ಒಕ್ಕುಂದ

'ಬೇಂದ್ರೆ ಕಾವ್ಯದಲ್ಲಿ ಮಾತೃತ್ವದ ಐದು ಮುಖಗಳು' ಎಂಬ ಈ ವಿಷಯದ ಆಯ್ಕೆಗೆ ಬೇಂದ್ರೆಯವರ 'ಗಂಗಾವತರಣ' ಸಂಕಲನದ 'ನಾನು' ಎಂಬ ಕವಿತೆಯೇ ಆಧಾರ. ಸ್ವವ್ಯಕ್ತಿತ್ವದ ನಿರೂಪಣೆ ಇರುವ ಪ್ರಸಿದ್ಧ ಕವಿತೆ ಇದು. ಸಾರ್ವಕಾಲಿಕವಾಗಿ ಪ್ರಸ್ತುತವೆನಿಸುವ ಸಾಂಸ್ಕೃತಿಕ ಸತ್ವಗಳನ್ನು, ಪರಂಪರೆಯ ಮೌಲ್ಯಗಳನ್ನು ಒಂದು ವ್ಯಕ್ತಿತ್ವದ ಸಾವಯವ ಘಟಕಗಳಾಗಿ, ಅಸ್ತಿತ್ವದ ಭಾಗವಾಗಿ, ಜೀವಧಾತುವಾಗಿ ಅನಾವರಣಗೊಳಿಸಿರುವ ಅಪರೂಪದ ಕವಿತೆಯಿದು. ಈ ಕವಿತೆಯನ್ನಿಲ್ಲಿ ಗಮನಿಸಿದರೆ ಈ ವಿಷಯದ ಸ್ಪಷ್ಟ ಕಲ್ಪನೆ ಮೂಡಬಲ್ಲದು.

ವಿಶ್ವಮಾತೆಯ ಗರ್ಭಕಮಲಜಾತ – ಪರಾಗದ / ಪರಮಾಣು ಕೀರ್ತಿ ನಾನು
ಭೂಮಿತಾಯಿಯ ಮೈಯ ಹಿಡಿಮಣ್ಣ ಗುಡಿಕಟ್ಟಿ / ನಿಂತಂಥ ಮೂರ್ತಿ ನಾನು
ಭರತಮಾತೆಯ ಕೋಟಿ ಕಾರ್ತಿಕೋತ್ಸವದಲ್ಲಿ / ಮಿನುಗುತಿಹ ಜ್ಯೋತಿ ನಾನು
ಕನ್ನಡದ ತಾಯಿ–ತಾವರೆಯ ಪರಿಮಳವುಂಡು / ಬೀರುತಿಹ ಗಾಳಿ ನಾನು
ನನ್ನ ತಾಯಿಯ ಹಾಲು ನೆತ್ತರವ ಕುಡಿದಂಥ / ಜೀವಂತ ಮಮತೆ ನಾನು
ಈ ಐದು ಐದೆಯರ ಪಂಚ ಪ್ರಾಣಗಳಾಗಿ / ಈ ಜೀವ ದೇಹನಿಹನು
ಹೃದಯಾರವಿಂದದಲ್ಲಿರುವ ನಾರಾಯಣನೆ / ತಾನಾಗಿ ದತ್ತನರನು
ವಿಶ್ವದೊಳನುಡಿಯಾಗಿ ಕನ್ನಡಿಸುತಿಹನಿಲ್ಲಿ / ಅಂಬಿಕಾತನಯನಿವನು

ಈ ಕವಿತೆಯ ಹೊರ ರಚನೆಯನ್ನು ಗಮನಿಸಿದಾಗ ವಸ್ತು, ಪದಬಳಕೆ, ಹೋಲಿಕೆ, ಛಂದೋರೂಪ ಮೊದಲಾದವುಗಳು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ನವೋದಯ, ರಮ್ಯ ಎಂದು ಗುರುತಿಸಲಾಗಿರುವ ಪಂಥದ ಕೆಲವು ಲಕ್ಷಣಗಳಿಗನುಗುಣವಾಗಿ ಇರುವುದಾಗಿ ಪರಿಭಾವಿಸಲು ಅವಕಾಶವಿದೆ. ಆದರೆ ನವೋದಯ–ರಮ್ಯ ಪಂಥಗಳ ಮುಂದಿನ ಹಂತಗಳಲ್ಲಿ ಸಹಜವಾಗಿಯೇ ಭಿನ್ನ ಸಾಧ್ಯತೆಗಳ ಹುಡುಕಾಟ – ಅಭಿವ್ಯಕ್ತಿಗಳು ನಡೆದಿದ್ದು ಆ ಕಾಲಘಟ್ಟಗಳಲ್ಲಿ ಹಿಂದಿನ